ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರ
ವಿಜಯಾ ಚೇತನ ಕಾಲೇಜು ಹಿಂಭಾಗ
(ಹೊಸ ಜಿಲ್ಲಾ ಆಸ್ಪತ್ರೆ ಎದುರು)
3ನೇ ಅಡ್ಡ ರಸ್ತೆ, ಭೀಮ್ ನಗರ
ಚಿಕ್ಕಬಳ್ಳಾಪುರ-562101

ಕರ್ನಾಟಕ ಸರ್ಕಾರ

# ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರ, ಚಿಕ್ಕಬಳ್ಳಾಪುರ.

ವಿಜಯಾ ಚೇತನ ಕಾಲೇಜು ಹಿಂಭಾಗ (ಹೊಸ ಜಿಲ್ಲಾ ಆಸ್ಪತ್ರೆ ಎದುರು), 3ನೇ ಅಡ್ಡರಸ್ತೆ, ಜೈ ಭೀಮ್ ನಗರ, ಚಿಕ್ಕಬಳ್ಳಾಪುರ.

ಸಂ:ಚಿಯೋಪ್ರಾ/ಚಿಬ/ವ.ವಿನ್ಯಾಸ/ಕುಡುವತಿ/64/2013-14/3493-43 ದಿನಾಂಕ: 01 AUG 2014

## "ಮಾರ್ಪಡಿತ ವಸತಿ ವಿನ್ಯಾಸನಕ್ಷೆ ಅನುಮೋದನೆ"

**ವಿಷಯ:** ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಕುಡುವತಿ ಗ್ರಾಮದ ಸ.ನಂ.50/3 ರಲ್ಲಿ 01.ಎಕರೆ 18.ಗುಂಟೆ, ಸ.ನಂ.51 ರಲ್ಲಿ 0-21.ಗುಂಟೆ, ಸ.ನಂ.52/1 ರಲ್ಲಿ 0-37.ಗುಂಟೆ, ಸ.ನಂ.52/2 ರಲ್ಲಿ 01.ಎಕರೆ 02.ಗುಂಟೆ, ಸ.ನಂ.53/1 ರಲ್ಲಿ 0-29.ಗುಂಟೆ, ಸ.ನಂ.53/2 ರಲ್ಲಿ 0-14.ಗುಂಟೆ, ಸ.ನಂ.53/3 ರಲ್ಲಿ 01.ಎಕರೆ 06.ಗುಂಟೆ, ಸ.ನಂ.53/4 ರಲ್ಲಿ 0-22.ಗುಂಟೆ, ಸ.ನಂ.53/5 ರಲ್ಲಿ 0-35.ಗುಂಟೆ, ಸ.ನಂ.53/6 0-39.ಗುಂಟೆ, ಸ.ನಂ.57 ರಲ್ಲಿ 03.ಎಕರೆ 30.ಗುಂಟೆ ಪೈಕಿ 01.ಎಕರೆ 35.ಗುಂಟೆ, ಸ.ನಂ.57 ರಲ್ಲಿ 03.ಎಕರೆ 30.ಗುಂಟೆ ಪೈಕಿ 01.ಎಕರೆ 35.ಗುಂಟೆ. ಸ.ನಂ.58 ರಲ್ಲಿ 02.ಎಕರೆ 38.ಗುಂಟೆ ಪೈಕಿ 0-09.ಗುಂಟೆ, ಸ.ನಂ.58 ರಲ್ಲಿ 02.ಎಕರೆ 38.ಗುಂಟೆ ಪೈಕಿ 0-20.ಗುಂಟೆ, ಸ.ನಂ.62/3 ರಲ್ಲಿ 0-08.ಗುಂಟೆ, ಸ.ನಂ.62/4 ರಲ್ಲಿ 0-19 1/2.ಗುಂಟೆ ಹಾಗೂ ಸ.ನಂ.62/5 ರಲ್ಲಿ 0-18.ಗುಂಟೆ **ಒಟ್ಟು 14.ಎಕರೆ 07 1/2.ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ 'ಮಾರ್ಪಡಿತ ವಸತಿ' ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ವಿನ್ಯಾಸದಲ್ಲಿನ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಅರ್ಜಿ ದಿನಾಂಕ:26.02.2014.

2) ಕುಪ್ಪಹಳ್ಳಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ರವರ ಪತ್ರ ದಿ.05.03.2014

3) ಈ ಕಛೇರಿಯ ಪತ್ರ ಸಂಖ್ಯೆ:ಚಿಯೋಪ್ರಾ/ಚಿಬ/ವಿನ್ಯಾಸ/19/2012-13/207 ದಿ.12.10.2012.

4) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆಗಳು:

ಅ) ಸಂಖ್ಯೆ.ಎಎಲ್ಎನ್.ಎಸ್.ಆರ್.193/2010-11,ದಿನಾಂಕ:27.05.2011,
ಆ) ಸಂಖ್ಯೆ.ಎಎಲ್ಎನ್.ಎಸ್.ಆರ್.190/2010-11,ದಿನಾಂಕ:21.04.2011,
ಇ) ಸಂಖ್ಯೆ.ಎಎಲ್ಎನ್.ಎಸ್.ಆರ್.95/2009-10,ದಿನಾಂಕ:11.06.2010,
ಈ) ಸಂಖ್ಯೆ.ಎಎಲ್ಎನ್.ಎಸ್.ಆರ್.90/2009-10,ದಿನಾಂಕ:11.06.2010,
ಉ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಊ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಋ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಎ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಏ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಐ) ಸಂಖ್ಯೆ.ಎಎಲ್ಎನ್.ಎಸ್.ಆರ್.227/2008-09,ದಿನಾಂಕ:09.10.2009,
ಒ) ಸಂಖ್ಯೆ.ಎಎಲ್ಎನ್.ಎಸ್.ಆರ್.189/2010-11,ದಿನಾಂಕ:27.05.2011,
ಓ) ಸಂಖ್ಯೆ.ಎಎಲ್ಎನ್.ಎಸ್.ಆರ್.94/2009-10,ದಿನಾಂಕ:11.06.2010,
ಔ) ಸಂಖ್ಯೆ.ಎಎಲ್ಎನ್.ಎಸ್.ಆರ್.194/2010-11,ದಿನಾಂಕ:27.05.2011,
ಅಂ) ಸಂಖ್ಯೆ.ಎಎಲ್ಎನ್.ಎಸ್.ಆರ್.164/2009-10,ದಿನಾಂಕ:06.10.2009,
ಅಃ) ಸಂಖ್ಯೆ.ಎಎಲ್ಎನ್.ಎಸ್.ಆರ್.92/2009-10,ದಿನಾಂಕ:11.06.2010,
ಕ) ಸಂಖ್ಯೆ.ಎಎಲ್ಎನ್.ಎಸ್.ಆರ್.97/2009-10,ದಿನಾಂಕ:09.10.2009,
ಖ) ಸಂಖ್ಯೆ.ಎಎಲ್ಎನ್.ಎಸ್.ಆರ್.92/2009-10,ದಿನಾಂಕ:11.06.2010,

5) ದಿನಾಂಕ:04.03.2014 ರ ಪ್ರಾಧಿಕಾರದ 10ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:10[3(8)] ರ ಬಗ್ಗೆ ಕೈಗೊಂಡ ನಿರ್ಣಯ.



Demo Version, http://www.verydoc.com and http://www.verypdf.com

6)ಅರ್ಜಿದಾರರು ಶುಲ್ಕ ಪಾವತಿಸಿರುವ ರಶೀದಿ ಸಂಖ್ಯೆ:717, ದಿನಾಂಕ:15.05.2014
7)ಉಪನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ 1ನೇ ಪುಸ್ತಕದ ದಸ್ತಾವೇಜು ನಂಬರ್ CKB-1-02161- 2014-15 ದಿನಾಂಕ:18.07.2014. ರ ನೋಂದಾಯಿತ ಪರಿತ್ಯಾಜನಾ ಪ್ರಮಾಣ ಪತ್ರ,
8)ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಿರಿಯ ಪರಿಸರ ಅಧಿಕಾರಿ, ಬೆಂಗಳೂರು ರವರ ಪತ್ರ ಸಂಖ್ಯೆ:PCB/106/CNP/14/493 ದಿ.26.07.2014.
9)ಸರ್ಕಾರದ ಸುತ್ತೋಲೆ ಸಂಖ್ಯೆನಅಇ 599 ಮೈಅಪ್ರಾ 2012, ದಿ:03.12.2012.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಕುಡುವತಿ ಗ್ರಾಮದ ಸ.ನಂ.50/3 ರಲ್ಲಿ 01.ಎಕರೆ 18.ಗುಂಟೆ, ಸ.ನಂ.51 ರಲ್ಲಿ 0–21.ಗುಂಟೆ, ಸ.ನಂ.52/1 ರಲ್ಲಿ 0–37.ಗುಂಟೆ, ಸ.ನಂ.52/2 ರಲ್ಲಿ 01.ಎಕರೆ 02.ಗುಂಟೆ, ಸ.ನಂ.53/1 ರಲ್ಲಿ 0–29.ಗುಂಟೆ, ಸ.ನಂ.53/2 ರಲ್ಲಿ 0–14.ಗುಂಟೆ, ಸ.ನಂ.53/3 ರಲ್ಲಿ 01.ಎಕರೆ 06.ಗುಂಟೆ, ಸ.ನಂ.53/4 ರಲ್ಲಿ 0–22.ಗುಂಟೆ, ಸ.ನಂ.53/5 ರಲ್ಲಿ 0–35.ಗುಂಟೆ, ಸ.ನಂ.53/6 0–39.ಗುಂಟೆ, ಸ.ನಂ.57 ರಲ್ಲಿ 03.ಎಕರೆ 30.ಗುಂಟೆ ಪೈಕಿ 01.ಎಕರೆ 35.ಗುಂಟೆ, ಸ.ನಂ.57 ರಲ್ಲಿ 03.ಎಕರೆ 30.ಗುಂಟೆ ಪೈಕಿ 01.ಎಕರೆ 35.ಗುಂಟೆ, ಸ.ನಂ.58 ರಲ್ಲಿ 02.ಎಕರೆ 38.ಗುಂಟೆ ಪೈಕಿ 0–09.ಗುಂಟೆ, ಸ.ನಂ.58 ರಲ್ಲಿ 02.ಎಕರೆ 38.ಗುಂಟೆ ಪೈಕಿ 0–20.ಗುಂಟೆ, ಸ.ನಂ.62/3 ರಲ್ಲಿ 0–08.ಗುಂಟೆ, ಸ.ನಂ.62/4 ರಲ್ಲಿ 0–19 1/2.ಗುಂಟೆ ಹಾಗೂ ಸ.ನಂ.62/5 ರಲ್ಲಿ 0–18.ಗುಂಟೆ ಒಟ್ಟು 14.ಎಕರೆ 07 1/2.ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ 'ಮಾರ್ಪಡಿತ ವಸತಿ' ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖ (1) ರಲ್ಲಿ ಅರ್ಜಿದಾರರು ಕೋರಿರುತ್ತಾರೆ.

ಈ ಸಂಬಂಧ ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಲಾಗಿ, ಉಲ್ಲೇಖಿತ(3)ರ ಪ್ರಾಧಿಕಾರದ ಆದೇಶದಲ್ಲಿ ಪ್ರಸ್ತಾಪಿತ ಪ್ರದೇಶಕ್ಕೆ ಈಗಾಗಲೇ ವಿನ್ಯಾಸನಕ್ಷೆ ಅನುಮೋದಿಸಲಾಗಿದ್ದು, ಈ ಸಂಬಂಧ ಉಲ್ಲೇಖ(2) ರಲ್ಲಿ ಕುಪ್ಪಹಳ್ಳಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಈಗಾಗಲೇ ಅನುಮೋದನೆಗೊಂಡಿರುವ ವಿನ್ಯಾಸ ನಕ್ಷೆಯಲ್ಲಿ ಇದುವರೆವಿಗೂ ಗ್ರಾಮ ಪಂಚಾಯ್ತಿಯಲ್ಲಿ ಖಾತೆ ನೋಂದಾಯಿಸಿರುವುದಿಲ್ಲ ಆದ ಕಾರಣ ವಿನ್ಯಾಸನಕ್ಷೆ ಮಾರ್ಪಡಿಸಲು ಪಂಚಾಯ್ತಿಯಿಂದ ಯಾವುದೇ ರೀತಿಯ ಅಭ್ಯಂತರವಿಲ್ಲವೆಂದು ತಿಳಿಸಲಾಗಿರುವಂತೆ ಹಾಗೂ ಜಮೀನಿಗೆ ಉಲ್ಲೇಖ(4) ರಲ್ಲಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅಧಿಕೃತ ಜ್ಞಾಪನದಲ್ಲಿ 'ವಸತಿ' ಉದ್ದೇಶಕ್ಕಾಗಿ ಭೂ–ಪರಿವರ್ತನೆಗೊಂಡಿರುವುದರಿಂದ ಉಲ್ಲೇಖ(5) ರಂದು ನಡೆದ ಪ್ರಾಧಿಕಾರದ 10ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 10[3(8)] ದಿನಾಂಕ:04.03.2014 ರಲ್ಲಿ ಮಂಡಿಸಲಾಗಿ, ಸಭೆಯಲ್ಲಿ ಮಾರ್ಪಡಿತ ವಿನ್ಯಾಸ ನಕ್ಷೆ ಅನುಮೋದನೆಗೆ ನಿರ್ಣಯಿಸಿರುವಂತೆ ನಿಗಧಿತ ಶುಲ್ಕ ಹಾಗೂ ಸೆಸ್ ಅನ್ನು ಅರ್ಜಿದಾರರು ಐ.ಎನ್.ಜಿ.ವೈಶ್ಯ ಬ್ಯಾಂಕ್ ಲಿ. ಚಿಕ್ಕಬಳ್ಳಾಪುರ ಇಲ್ಲಿ ಪ್ರಾಧಿಕಾರ ಹೆಸರಿನಲ್ಲಿ ದಿನಾಂಕ:13.05.2014 ರಂದು ಡಿ.ಡಿ.ಸಂಖ್ಯೆ:665909 ರೂ.28,707–00 ಹಾಗೂ ಡಿ.ಡಿ.ಸಂಖ್ಯೆ:665910 ರೂ.7175–00, ಡಿ.ಡಿ.ಗಳನ್ನು ಪಡೆದು ಸಲ್ಲಿಸಿರುತ್ತಾರೆ. ಸದರಿ ಮೊತ್ತವನ್ನು ಉಲ್ಲೇಖ(5) ರಶೀದಿ ಸಂಖ್ಯೆ:717 ದಿನಾಂಕ:15.05.2014 ರಲ್ಲಿ ನಮೂದಿಸಲಾಗಿದೆ.

ಉಪನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ನೋಂದಾಯಿತ ಪರಿತ್ಯಾಜನಾ ಪ್ರಮಾಣ ಪತ್ರದಂತೆ ಉಲ್ಲೇಖ(7) ರಲ್ಲಿ ಪ್ರಸ್ತಾಪಿತ ಜಮೀನಿನ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಲಾದ ಸಾರ್ವಜನಿಕ ಉಪಯೋಗಗಳ ಜಾಗಗಳಾದ ರಸ್ತೆ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯಗಳನ್ನು ಕುಪ್ಪಹಳ್ಳಿ ಗ್ರಾಮ ಪಂಚಾಯ್ತಿಗೆ ಪರಿತ್ಯಾಜನಾ ಪ್ರಮಾಣ ಪತ್ರದ ಮುಖೇನ ಹಸ್ತಾಂತರಿಸುವಂತೆ ಹಾಗೂ ಉಲ್ಲೇಖ(5) ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆ ನೀಡಲಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17 ರಡಿಯಲ್ಲಿ 'ವಸತಿ' ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ, ವಿನ್ಯಾಸ ನಕ್ಷೆಯ ಭೂ–ಉಪಯೋಗ ವಿಶ್ಲೇಷಣೆಯಲ್ಲಿ



Demo Version, http://www.verydoc.com and http://www.verypdf.com

ವಸತಿಗಾಗಿ 30,089.21 ಚ.ಮೀ(52.41%), ಉದ್ಯಾನವನ/ಬಯಲುಜಾಗ 5,815.55 ಚ.ಮೀ(10.13%), ನಾಗರೀಕ ಸೌಲಭ್ಯ 3,155.42 ಚ.ಮೀ(5.50%) ಮತ್ತು ರಸ್ತೆಗಾಗಿ 18,353.79 ಚ.ಮೀ(31.96%) ವಿಸ್ತೀರ್ಣಗಳೊಂದಿಗೆ ಒಟ್ಟು **204 ವಿವಿಧ ಅಳತೆಗಳ ವಸತಿ ನಿವೇಶನಗಳನ್ನು ಅಳವಡಿಸಿ ಕೆಳಕಂಡ ನಿಬಂಧನೆಗಳೊಡನೆ 'ಮಾರ್ಪಾಡಿತ ವಸತಿ'** ವಿನ್ಯಾಸ ನಕ್ಷೆಯನ್ನು ಅನುಮೋದಿಸಿ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲು ಅನುಮತಿ ನೀಡಿ ಉಲ್ಲೇಖಿತ ಸರ್ಕಾರದ ಸುತ್ತೋಲೆಯಂತೆ ಪ್ರಥಮ ಹಂತದಲ್ಲಿ ಶೇ.40 ರಷ್ಟು ವಸತಿ ನಿವೇಶನಗಳನ್ನು ಬಿಡುಗಡೆಗೊಳಿಸಿರುವ ಬಗ್ಗೆ ಪ್ರಮಾಣ ಪತ್ರ-1 ಅನ್ನು ಅಡಕಗೊಳಿಸಲಾಗಿದೆ.

ನಿಬಂಧನೆಗಳು:

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 2 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಸದರಿ ಪ್ರದೇಶದ ವಿನ್ಯಾಸದಲ್ಲಿ ಬರುವ ಎಲ್.ಟಿ.ಲೈನ್ ಕಂಬಗಳನ್ನು ರಸ್ತೆಗಳ ಬದಿಗಳಿಗೆ ಅನುಗುಣವಾಗಿ ಸ್ಥಳಾಂತರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ವಿನ್ಯಾಸ ಪ್ರದೇಶವನ್ನು ರೂಪರೇಖಾ ನಕ್ಷೆಯಂತೆ ಈ ಪ್ರಾಧಿಕಾರದಿಂದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ /ಜಾಗಗಳು, ನಾಗರೀಕ ಸೌಲಭ್ಯ, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿ ಪಡಿಸತಕ್ಕದ್ದು.
4. ಅನುಮೋದಿತ ರೂಪರೇಖಾ ನಕ್ಷೆಯಂತೆ ನೆಲದ ಮೇಲೆ ಸಂಬಂಧಿತ ಇಲಾಖಾ ನಿಯಮಾವಳಿಯಂತೆ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿ, ಸಂಬಂಧಿಸಿದ ಇಲಾಖೆಗಳಿಂದ ಕೆಲಸ ಪೂರ್ಣಗೊಂಡಿರುವ ಬಗ್ಗೆ ದೃಢೀಕರಣ ಪತ್ರದೊಂದಿಗೆ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ವಿನ್ಯಾಸದ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸತಕ್ಕದ್ದು.
7. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಿದ ರಸ್ತೆಗಳು ನಾಗರಿಕ ಸೌಲಭ್ಯದ ಜಾಗ ಹಾಗೂ ಉದ್ಯಾನವನ ಜಾಗಗಳಲ್ಲಿ ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ರೀತಿ ನಿರ್ಬಂಧಿಸತಕ್ಕದ್ದಲ್ಲ.
10. ವಿನ್ಯಾಸ ಅಭಿವೃದ್ಧಿಪಡಿಸುವಾಗ ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿರುವ ಜಾಗಗಳನ್ನು ಅನುಮೋದಿತ ವಿನ್ಯಾಸದಂತೆ ಅಭಿವೃದ್ಧಿಪಡಿಸಬೇಕು.
11. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.



Demo Version, http://www.verydoc.com and http://www.verypdf.com

12. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

13. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲೀಕತ್ವ ದಾಖಲೆ ಮತ್ತು ಇತರೆ ಯಾವುದೇ ದಾಖಲೆ/ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಮೋಸಪೂರಿತವಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ.

14. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಈ ಪ್ರಾಧಿಕಾರದ ನಕ್ಷೆಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

15. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.

16. ನೀರು ಸರಬರಾಜು ವ್ಯವಸ್ಥೆ ಬಗ್ಗೆ ಸರ್ಕಾರವು ಮುಂದೆ ವಿಧಿಸುವ ಯಾವುದೇ ಹೆಚ್ಚಿನ ಶುಲ್ಕಗಳನ್ನು ಅಭಿವೃದ್ಧಿದಾರರೇ ಭರಿಸಲು ಬದ್ಧರಾಗಿರಬೇಕು.

17. ವಿನ್ಯಾಸದಲ್ಲಿನ ನೀರಿನ ಪೂರೈಕೆಗೆ ಅನುಗುಣವಾಗಿ ಅಗತ್ಯ ಮೇಲ್ಮಟ್ಟದ ನೀರಿನಟ್ಯಾಂಕ್ (Over Head Tank) ಅನ್ನುಕಡ್ಡಾಯವಾಗಿ ಅಳವಡಿಸುವುದು.

18. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸುವಾಗ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 06.07.2010 ರಂದು ನೀಡಿರುವ ಆದೇಶದನ್ವಯ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪ್ರಮಾಣ ಪತ್ರ ಪಡೆಯತಕ್ಕದ್ದು.

19. ಸದರಿ ವಿನ್ಯಾಸವನ್ನು ನೆಲದ ಮೇಲೆ ಅಳವಡಿಸಿರುವ ಬಗ್ಗೆ ತಹಸೀಲ್ದಾರ್, ಚಿಕ್ಕಬಳ್ಳಾಪುರ ರವರಿಂದ ಕೆ.ಜೆ.ಪಿ. ಪಡೆದು ಸಲ್ಲಿಸತಕ್ಕದ್ದು.

20. ವಿನ್ಯಾಸದ ಅನುಮೋಧನೆಯಲ್ಲಿ ವಿಧಿಸಿರುವ ಯವ್ಪುದೇ ನಿಬಂಧನೆಗಳನ್ನು ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

21. ವಿನ್ಯಾಸವನ್ನು ಸರ್ವೆಸ್ಕೆಚ್‌ನ ಆಧಾರದ ಮೇಲೆ ತಯಾರಿಸಲಾಗಿದ್ದು, ವಿನ್ಯಾಸದ ಎಲ್ಲೆ ಹಾಗೂ ಅನಿಯತ ನಿವೇಶನಗಳ ಅಂತಿಮ ಅಳತೆಗಳನ್ನು ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿದ ನಂತರ ನಿರ್ಧರಿಸುವುದು.

22. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:599:ಮೈಅಪ್ರಾ:2012 ದಿ: 03-12-2012 ರನ್ವಯ, ಶೇ.40 ರಷ್ಟು ನಿವೇಶನಗಳನ್ನು ಪ್ರಾರಂಭಿಕ ಹಂತದಲ್ಲಿ ಬಿಡುಗಡೆಗೊಳಿಸಿ ಎರಡು ವರ್ಷಗಳೊಳಗಾಗಿ ವಿನ್ಯಾಸವನ್ನು ಸುತ್ತೋಲೆಯಂತೆ ಅಭಿವೃದ್ಧಿಪಡಿಸಿ, ಉದ್ಯಾನವನ/ ಬಯಲುಜಾಗ ಪ್ರದೇಶಗಳು ಮತ್ತು ನಾಗರಿಕ ಸೌಲಭ್ಯದ ಜಾಗಗಳು ಎಲ್ಲಾ ರಸ್ತೆಗಳನ್ನು ಸಂಬಂಧ ಪಟ್ಟ ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ಅರ್ಜಿದಾರರಿಂದ ನೋಂದಾಯಿಸಿಕೊಂಡ ನಂತರವೇ ಉಳಿದ ಶೇ.60 ರಷ್ಟು ನಿವೇಶನಗಳ ಪೈಕಿ 2ನೇ ಹಂತದಲ್ಲಿ ಶೇಕಡ 30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗುವುದು ಮೇಲ್ಕಂಡ ಎರಡು ಹಂತಗಳಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ ಅಂತಿಮವಾಗಿ ಉಳಿಯುವ ಶೇ.30 ರಷ್ಟು ನಿವೇಶನಗಳನ್ನು ಸುತ್ತೋಲೆಯ ಅಂಶಗಳನ್ನು ಪಾಲಿಸಿದ ನಂತರ ಬಿಡುಗಡೆಗೊಳಿಸಲಾಗುವುದು.



Demo Version, http://www.verydoc.com and http://www.verypdf.com

ಪ್ರಾರಂಭಿಕ ಹಂತದಲ್ಲಿ ಶೇಖಡ 40 ರಷ್ಟು ವಸತಿ ನಿವೇಶನಗಳ ಬಿಡುಗಡೆ ವಿವರ:

| ಕ್ರಮ ಸಂಖ್ಯೆ | ನಿವೇಶನಗಳ ಅಳತೆಗಳು | ನಿವೇಶನ ಸಂಖ್ಯೆಗಳು | ಒಟ್ಟು ಸಂಖ್ಯೆ |
|---|---|---|---|
| 01 | 9.14ಮೀx12.19ಮೀ. | 67,68,69,70,82,128,129,130,131,132,133,134,135,136,144, 145,146,147,148,149,150,151,152,153,175,178,179,180,181. . . . . . . . . . | 29 |
| 02 | 9.14ಮೀx15.24ಮೀ. | 2,3,4,29,30,31,32,33,37,38,39,40,41,42,83,84,85,86,87, 88,89,90,106,107,108,109,110,155,156,157,158,159,160, 161,162,185,186,187,188,189,190,191,192, | 43 |
| 03 | 12.19ಮೀx18.29ಮೀ. | 100,101,102,194,195,196,200,204,202,203, | 10 |
| ಒಟ್ಟು | | | 82 |

23. ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ನಿಯಮಾನುಸಾರಇತರ ಶುಲ್ಕಗಳನ್ನು ಪಾವತಿಸತಕ್ಕದ್ದು.

ವಿನ್ಯಾಸ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ಧಿಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ 1961ರ ಸೆಕ್ಷನ್ 17 (4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ಗಮನಕ್ಕೆ ತರಲಾಗಿದೆ.

1.8.14

ಸಹಾಯಕ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರ
ಚಿಕ್ಕಬಳ್ಳಾಪುರ.

ಇವರಿಗೆ,

ಶ್ರೀ ಎನ್.ರವೀಂದ್ರ ಕುಮಾರ್ ಹಾಗೂ ಕೆ.ಎಸ್.ಭರತ್, ನಂ.135/ಎ-35, ಮೊದಲನೇ ಮಹಡಿ, 9ನೇ ಮುಖ್ಯರಸ್ತೆ, ಸದಾಶಿವನಗರ ಬೆಂಗಳೂರು-560 080. ರವರ ಮಾಹಿತಿಗೆ ಹಾಗೂ ಕುಪ್ಪಹಳ್ಳಿ ಗ್ರಾಮ ಪಂಚಾಯಿತಿಯಿಂದ ನೀಲಿನಕ್ಷೆ ಪಡೆದು ಮುಂದಿನ ಕ್ರಮವಹಿಸಲು ಸೂಚಿಸಲಾಗಿದೆ.



Demo Version, http://www.verydoc.com and http://www.verypdf.com